# ಕರ್ನಾಟಕ ಸರಕಾರದ ನಡುವಳಿಕೆಗಳು

ವಿಷಯ:- ರಾಯಚೂರು ತಾಲೂಕಿನ: **ರಘುನಾಥಹಳ್ಳಿ** ಗ್ರಾಮದ ಕೆಲವು ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ನಾರಾಯಣಪೂರ ಬಲದಂಡೆ ಕಾಲುವೆ ಅಡಿಯಲ್ಲಿ ಬರುವ ವಿತರಣಾ ಕಾಲುವೆ ಸಂ.23ರ ಕಿ.ಮೀ.6.746 ರಿಂದ 10.206 ಕಿ.ಮೀ.ವರೆಗಿನ ನಿರ್ಮಾಣಕ್ಕಾಗಿ ಗ್ರಾಮದ ಜಮೀನುಗಳು ಭೂಸ್ವಾಧೀನವಾಗುವ ಕುಟುಂಬಗಳಿಗೆ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಯ ಕರಡು ಯಾದಿಯನ್ನು ಅನುಮೋದಿಸುವ ಕುರಿತು.

ಓದಲಾಗಿದೆ: 1} ಭೂಸ್ವಾಧೀನ ಕಾಯ್ದೆ 2013ರ ಕಲಂ 11(1)ಕ್ಕೆ ಅನುಸಾರವಾಗಿ ಹೊರಡಿಸಲಾಗಿರುವ ಅಧಿಸೂಚನೆ ದಿನಾಂಕ: 06-09-2018.

2} ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಕುರಿತು.

3} ಸರ್ಕಾರದ ಆದೇಶ ಸಂಖ್ಯೆ: ಕಂಇ:18:ಆರ್‌ಇಹೆಚ್:2014:ಬೆಂಗಳೂರು ದಿನಾಂಕ: 06-02-2014.

4} ಈ ಕಾರ್ಯಾಲಯದ ಪತ್ರ ಸಂ/ಕಂಇ/ಭೂಸ್ವಾ-3/ಸಿಆರ್-91/2018-19/940 ದಿನಾಂಕ: 18-10-2019.

5} ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ನಾರಾಯಣಪೂರ ಇವರ ಪತ್ರ ಸಂ.478, ದಿನಾಂಕ: 23-10-2019 (ಈ ಕಛೇರಿ ಸ್ವೀಕೃತಿ ದಿನಾಂಕ: 31-10-2019).

6} ಮಹಾ ವ್ಯವಸ್ಥಾಪಕರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃ.ಮೇ.ಯೋ. ನವನಗರ, ಬಾಗಲಕೋಟ ಇವರ ಕಲಂ 17(2)ರಡಿ ಶಿಫಾರಸ್ಸು ದಿನಾಂಕ: 25-11-2019.

*******

ಆದೇಶ ಸಂ:ಕಂ.ಇ/ಭೂಸ್ವಾ-3/ಸಿಆರ್-91/2018-19/1268 ದಿನಾಂಕ: 02-12-2019.

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ನಾರಾಯಣಪೂರ ಇವರಿಂದ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಸಾರ್ವಜನಿಕ ಉದ್ದೇಶಕ್ಕಾಗಿ ರಾಯಚೂರ ತಾಲೂಕಿನ: **ರಘುನಾಥಹಳ್ಳಿ** ಗ್ರಾಮದ ಕೆಲವು ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ನಾರಾಯಣಪೂರ ಬಲದಂಡೆ ಕಾಲುವೆ ಅಡಿಯಲ್ಲಿ ಬರುವ ವಿತರಣಾ ಕಾಲುವೆ ಸಂ.23ರ ಕಿ.ಮೀ.6.746 ರಿಂದ 10.206 ಕಿ.ಮೀ.ವರೆಗಿನ ನಿರ್ಮಾಣಕ್ಕಾಗಿ ಜಮೀನು ಭೂಸ್ವಾಧೀನಪಡಿಸಿತ್ತಿರುವ ಪ್ರಕರಣಗಳಿಗೆ ಒಟ್ಟು 33ಎ-**34ಗುಂ** ಕ್ಷೇತ್ರಕ್ಕೆ ನೂತನ ಕಾಯ್ದೆ ಕಲಂ 16(2) ನೇದ್ದರ ಮೇರೆಗೆ ಗಣತಿ ಕಾರ್ಯವನ್ನು ಕೈಗೊಂಡು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಯೋಜನೆಯ ಯಾದಿಯನ್ನು ತಯಾರಿಸಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ. ದೇವದುರ್ಗ ಇವರನ್ನು ಈ ಯೋಜನೆಗೆ ಕಾರ್ಯವನ್ನು ನಿರ್ವಹಿಸಲು ನೇಮಿಸಲಾಗಿದೆ ಮತ್ತು ಸ್ವತ್ತುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಆದೇಶಿಸುವ ಅಧಿಕಾರವನ್ನು ನೀಡಲಾಗಿದೆ.

ಉಲ್ಲೇಖಿತ ಪತ್ರ 4 ರನ್ವಯ ಕಲಂ 19(7) ರಡಿ ದಿ: 05-**03-2020** ರವರೆಗೆ ಕಾಲಾವಕಾಶ ನೀಡಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಚಿತ ಪರಿಹಾರಕ್ಕೆ ಹಕ್ಕು, ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಅಧಿನಿಯಮ, 2013ರ ಕಲಂ 16(6)ರ ಅನುಗುಣವಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಹಾಗೂ ಭೂಸ್ವಾಧೀನ ಕಾಯ್ದೆ 2013ರ ಕಲಂ 45 ರಡಿ ಪ್ರಕರಣದಲ್ಲಿ ಸದರಿ ಭೂಸ್ವಾಧೀನ ಪ್ರಕರಣದಲ್ಲಿ ಒಳಗೊಂಡ ಕ್ಷೇತ್ರವು 100 ಎಕರೆಗಿಂತ ಕಡಿಮೆ ಇರುವುದರಿಂದ ಅನ್ವಯಿಸುವುದಿಲ್ಲ.

ನೂತನ ಭೂಸ್ವಾಧೀನ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ರ ಕಲಂ 16(3)ರಡಿ ತಯಾರಿಸಲಾದ ಗಣತಿ ಯಾದಿಯಲ್ಲಿ ಒಟ್ಟು ಕ್ಷೇತ್ರ: 33ಎ-**34ಗುಂ**. ಕ್ಷೇತ್ರದಲ್ಲಿ ಜಮೀನು ಸ್ವಾಧೀನಕ್ಕೆ ಒಳಪಡುತ್ತಿದ್ದು, ಈ ಪೈಕಿ ಒಟ್ಟು: **30** ಕುಟುಂಬಗಳು ಬಾಧಿತಗೊಳ್ಳುತ್ತಿದ್ದು, ನೂತನ ಭೂಸ್ವಾಧೀನ ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆ ಕಾಯ್ದೆ 2013ರ ಕಲಂ 16(3)ರಡಿ ತಯಾರಿಸಲಾದ ಗಣತಿ ಯಾದಿಯಲ್ಲಿ **ಒಟ್ಟು ಕ್ಷೇತ್ರ: 33ಎ-34ಗುಂ**. ಕ್ಷೇತ್ರದಲ್ಲಿ ಜಮೀನು ಸ್ವಾಧೀನಕ್ಕೆ ಒಳಪಡುತ್ತಿದ್ದು, ಈ ಪೈಕಿ ಒಟ್ಟು: **30** ಕುಟುಂಬಗಳು ಬಾಧಿತಗೊಳ್ಳುತ್ತಿದ್ದು, ಇದರಲ್ಲಿ ಯಾವುದೇ ಕುಟುಂಬಗಳು ಅವರು ಹೊಂದಿದ ಕ್ಷೇತ್ರಕ್ಕಿಂತ ಬಹುಪಾಲು ಭೂಮಿಯನ್ನು ಕಳೆದುಕೊಳ್ಳುವುದಿಲ್ಲ. ಹಾಗೂ ಜೀವನೋಪಾಯ ನಷ್ಟತೆಯನ್ನು ಹೊಂದುವುದಿಲ್ಲ ಎಂಬುದರ ಬಗ್ಗೆ

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ನಾರಾಯಣಪೂರವರು ಪುನರ್‌ವಸತಿ ಮತ್ತು ಪುನರ್‌ವ್ಯವಸ್ಥೆಯ ಯೋಜನೆಯ ಕರಡು ಯಾದಿಯನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ನಾರಾಯಣಪೂರ ಇವರು ಶಿಫಾರಸ್ಸು ಮಾಡಿರುವ ಯಾದಿಯನ್ನು ಆಧರಿಸಿ, ನೂತನ ಭೂಸ್ವಾಧೀನ ಕಾಯ್ದೆ 2013ರ ಕಲಂ 84 ರನ್ವಯ ಸೌಲಭ್ಯ ಪಡೆಯುವ ಕುಟುಂಬವು ಸುಳ್ಳು ಮಾಹಿತಿ ನೀಡಿದಲ್ಲಿ ಕಲಂ 84 (1) (2) ಹಾಗೂ (3) ರನ್ವಯ ಶಿಕ್ಷೆಗೆ ಗುರಿಪಡಿಸಲಾಗುವುದೆಂಬ ಷರತ್ತಿಗೆ ಒಳಪಟ್ಟು ಪುನರ್‌ವ್ಯವಸ್ಥೆ ಯೋಜನೆಯ ಪ್ರಸ್ತಾವನೆಯನ್ನು ನೂತನ ಕಾಯ್ದೆ ಕಲಂ 18ರಡಿ ಅನುಮೋದಿಸಲಾಗಿದೆ.

ಕಾಯ್ದೆ ಕಲಂ 41(6)ರಡಿ ಅನುಸೂಚಿತ ಪಂಗಡ ಹಾಗೂ ಬುಡಕಟ್ಟು ಜನಾಂಗಗಳಿಗೆ ಭೂಸ್ವಾಧೀನ ಪ್ರಕರಣಗಳು ಒಳಪಟ್ಟದ್ದಲ್ಲಿ ಸ್ವಾಧೀನದ ಸ್ವತ್ತುಗಳ ಶೇಕಡಾ 1/3 ರಷ್ಟು ಪರಿಹಾರಧನವನ್ನು ಸ್ವಾಧೀನ ಪೂರ್ವದಲ್ಲಿ ಬಾಧಿತ ಕುಟುಂಬಗಳಿಗೆ ಪಾವತಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಆಯುಕ್ತರು,
ಪುಪು ಮತ್ತು ಭೂಸ್ವಾಧೀನ, ಕೃ.ಮೇ.ಯೋ.,
ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು,
ಕರ್ನಾಟಕ ಸರಕಾರ, ಕಂದಾಯ ಇಲಾಖೆ,
ನವನಗರ, ಬಾಗಲಕೋಟೆ.

ಇವರಿಗೆ:

1. ಜಿಲ್ಲಾಧಿಕಾರಿಗಳು, ರಾಯಚೂರ ಜಿಲ್ಲೆ ಇವರಿಗೆ ಮಾಹಿತಿ ಕುರಿತು ಕಳುಹಿಸಿದೆ.
2. ಮಹಾ ವ್ಯವಸ್ಥಾಪಕರು, ಪು ಮತ್ತು ಪು. ಕೃ.ಮೇ.ಯೋ. ನವನಗರ, ಬಾಗಲಕೋಟೆ ಇವರಿಗೆ
3. ವಿಶೇಷ ಜಿಲ್ಲಾಧಿಕಾರಿ, ಕೃ.ಮೇ.ಯೋ. ನವನಗರ, ಬಾಗಲಕೋಟೆ ಇವರಿಗೆ ಮಾಹಿತಿ ಕುರಿತು ಕಳುಹಿಸಿದೆ.
4. ಉಪ ವಿಭಾಗಾಧಿಕಾರಿ, ರಾಯಚೂರ ಇವರಿಗೆ ಮಾಹಿತಿಗಾಗಿ.
5. ಪುನರ್‌ವಸತಿ ಅಧಿಕಾರಿ, ಕೃ.ಮೇ.ಯೋ. ನಾರಾಯಣಪೂರ ಇವರಿಗೆ ಸಂಬಂಧಪಟ್ಟ ಕಡತದೊಂದಿಗೆ ಹಿಂದಿರುಗಿಸಲಾಗಿದೆ.
6. ವಿಶೇಷ ಭೂಸ್ವಾಧೀನಾಧಿಕಾರಿ, ಕೃ.ಮೇ.ಯೋ. ದೇವದುರ್ಗ ಇವರಿಗೆ ಸೂಕ್ತ ಕ್ರಮಕ್ಕಾಗಿ.
7. ತಹಶೀಲ್ದಾರರು, ರಾಯಚೂರು ತಾಲೂಕ ಇವರ ಮಾಹಿತಿಗಾಗಿ.
8. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾಮ ಪಂಚಾಯತ, **ರಘುನಾಥಹಳ್ಳಿ** ತಾ: ರಾಯಚೂರು ಇವರಿಗೆ.
9. Web site: www.bagalkot.nic.in/ukp. ಅಂತರಜಾಲದಲ್ಲಿ ಅಳವಡಿಸಲು ಸಿಸ್ಟಂ ಮ್ಯಾನೇಜರ, ಕಂಪ್ಯೂಟರ ವಿಭಾಗ ಪು ಮತ್ತು ಪು. ಕೃ.ಮೇ.ಯೋ. ನವನಗರ, ಬಾಗಲಕೋಟೆ ಇವರಿಗೆ.
10. ಭೂಸ್ವಾಧೀನ ಶಾಖೆಗೆ.

ಎಂಜಿವ: